ನೀಡಲಾಗಿದೆ;

ಅ) ಅವುಗಳಲ್ಲಿ ಎಷ್ಟು ಪರವಾನಗಿಗಳನ್ನು ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡ ಮತ್ತು ಅಲ್ಪ ಸಂಖ್ಯಾತರುಗಳಿಗೆ ನೀಡಲಾಗಿದೆ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು):

ಅ) ಕಳೆದ ಮೂರು ವರ್ಷಗಳಲ್ಲಿ ಈ ಕೆಳಗೆ ಸೂಚಿಸಿರುವಂತೆ ಅಂತರ ರಾಜ್ಯ ಬಸ್ ಪರವಾನಗಿಗಳನ್ನು ನೀಡಲಾಗಿದೆ. (ಖಾಸಗೀ ಮತ್ತು ಸರ್ಕಾರೀ ಸ್ವಾಮ್ಯ ಸಂಸ್ಥೆಗಳು)

1995-96	139
1996-97	85
1997-98	80

ಅ) ಅಂತರರಾಜ್ಯ ಬಸ್ ಪರ್ಮಿಟ್ ಮಂಜೂರಾತಿಗಾಗಿ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡಗಳಿಗೆ ಸೇರಿದವರು ಯಾರು ಅರ್ಜಿ ಸಲ್ಲಿಸಿರುವುದಿಲ್ಲ.

ಭಟ್ಕಳ ಹಾಗೂ ಹೊನ್ನಾವರ ತಾಲ್ಲೂಕುಗಳ ಜಮೀನು ಪಟ್ಟಾ.

2814: (3743)

ಶ್ರೀ ಶಿವಾನಂದ ನಾಯ್ಕ್ (ಭಟ್ಕಳ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಟ್ಕಳ ಕಂದಾಯ ವಿಭಾಗದಲ್ಲಿ (ಭಟ್ಕಳ ಹಾಗೂ ಹೊನ್ನಾವರ ತಾಲ್ಲೂಕು) ಕಳೆದ ಐದು ವರ್ಷಗಳಲ್ಲಿ ಹೊಸದಾಗಿ ಮಂಜೂರು ಮಾಡಲಾಗಿರುವ ಜಮೀನು ಪಟ್ಟಾ ಪ್ರಕರಣಗಳೆಷ್ಟು; (ಸರ್ವೆ ನಂ. ಹಾಗೂ ಹೆಸರು, ಗಾತ್ರ ಸಹಿತ ವಿವರ ನೀಡುವುದು)

ಆ) ಈ ರೀತಿ ಮಂಜೂರು ಮಾಡಲಾಗಿರುವ ಪ್ರಕರಣಗಳಲ್ಲಿ ಕಂದಾಯ ಜಮೀನು, ಅರಣ್ಯ ಜಮೀನು (ಟ್ರಿಬ್ಯೂನಲ್, ಅತಿಕ್ರಮಣ ಸಕ್ರಮಣ ಸಹಿತ) ಎಷ್ಟು?

ಇ) ಈ ರೀತಿಯ ಮಂಜೂರಾದ ಪ್ರಕರಣಗಳಲ್ಲಿ ಎಷ್ಟು ಪ್ರಕರಣಗಳಲ್ಲಿ ಸರಿಯಾದ ಕ್ರಮಗಳನ್ನು ಕೈಗೊಳ್ಳಲಾಗಿದೆ ಹಾಗೂ ಎಷ್ಟು ಮೇಲಾಧಿಕಾರಿಗಳನ್ನು ತನಿಖೆಗೆ ಒಳಪಡಿಸಲಾಗಿದೆ;

ಈ) ಹೆಚ್ಚುವರಿ ಜಾಗವೆಂದು ಮಂಜೂರು ಮಾಡಿರುವ ಪ್ರಕರಣಗಳೆಷ್ಟು; ಇದರಿಂದ ಪರಿಸರದ ಮೇಲೇನಾದರೂ ಪ್ರತಿಕೂಲ ಪರಿಣಾಮ ಉಂಟಾಗಿದೆಯೇ?

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು):

ಅ)

ಅ.ನಂ		ಹೊನ್ನಾವರ ತಾಲ್ಲೂಕು		ಭಟ್ಕಳ ತಾ:		ಒಟ್ಟು ಕ್ಷೇತ್ರ	
		ಸಂಖ್ಯೆ	ಕ್ಷೇತ್ರ	ಸಂ.	ಕ್ಷೇತ್ರ	ಸಂ.	ಕ್ಷೇತ್ರ
1.	ಸಮುಹ ನಂ. 50	58	108-00	39	44-00	97	147
2.	ಹಂಗಾಮಿ ಲಾಗಣ ಖಾಯಂ ಗೊಳಿಸಿದ್ದು (ಅರಣ್ಯ ಜಮೀನು)	650	1306-00	368	890-00	988	2196-00
3.	ಅರಣ್ಯ ಅತಿಕ್ರಮಣ ಸಕ್ರಮೀಕರಣ	165	186-00	79	27-00	243	213-00
4.	ಮನೆ ನಿವೇಶನ	146	14-00	-	-	146	14-00
		989	1609-00	485	961-00	1474	2570-00

ಆ)

ಅ.ನಂ ಪ್ರವರ್ಗ	ಹೊನ್ನಾವರ ತಾಲ್ಲೂಕು ಕ್ಷೇತ್ರ ಎಕರೆ	ಭಟ್ಕಳ ತಾಲ್ಲೂಕು ಕ್ಷೇತ್ರ ಎಕರೆ	ಒಟ್ಟು ಕ್ಷೇತ್ರ ಎಕರೆ
ಕಂದಾಯ ಜಮೀನು			
1. ಸ.ನಂ. 50ರ ಅರ್ಜಿಗಳು	103-00	44-00	147-00
2. ಮನೆ ನಿವೇಶನ	14-00	-	14-00
	117-00	44-00	161-00
ಅರಣ್ಯ ಜಮೀನು			
1. ಹಂಗಾಮಿ ಲಾಗಣ ಖಾಯಂ ಗೊಳಿಸಿದ್ದು	1306-00	890-00	2196-00
2. ಅತಿಕ್ರಮಣ	186-00	27-00	218-00
ಸಕ್ರಮ	1492-00	917-00	2400-00
ಒಟ್ಟು	1609-00	961-00	2570-00

ಭೂ ನ್ಯಾಯ ಮಂಡಳಿಗಳಿಂದ ಭೂಮಿ ಮಂಜೂರಾಗಿದ್ದು ಇರುವುದಿಲ್ಲ. ಆದರೆ ಅಧಿಭೋಗದಾರಿಕೆಯ ಹಕ್ಕನ್ನು ಮಾತ್ರ ಅಂಗೀಕರಿಸಿದ್ದು ಇರುತ್ತದೆ.

ಇ) ಇಂತಹ ಪ್ರಕರಣಗಳಿರುವುದಿಲ್ಲ.

ಈ) ಹೊನ್ನಾವರ ಮತ್ತು ಭಟ್ಕಳ ತಾಲ್ಲೂಕುಗಳಲ್ಲಿ ಭೂ ಸುಧಾರಣೆ ಕಾಯ್ದೆಯನ್ವಯ ಹೆಚ್ಚುವರಿ ಭೂಮಿಯನ್ನು ಕಂಡು ಹಿಡಿದ ಪ್ರಕರಣಗಳಿರುವುದಿಲ್ಲ. ಇದರಿಂದಾಗಿ ಪರಿಸರದ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಪ್ರಶ್ನೆ ಉದ್ಭವಿಸುವುದಿಲ್ಲ.

ಭಟ್ಕಳ ತಾಲ್ಲೂಕು ಹಾಗೂ ಹೊನ್ನಾವರ ತಾಲ್ಲೂಕಿನ ಗುಂಡಬಾಳ ನೆರೆಹಾವಳಿ.

2815: (2988)

ಶ್ರೀ ಶಿವಾನಂದ ನಾಯ್ಕ್ (ಭಟ್ಕಳ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಟ್ಕಳ ತಾಲ್ಲೂಕು ಹಾಗೂ ಹೊನ್ನಾವರ ತಾಲ್ಲೂಕಿನ ಗುಂಡಬಾಳ ನೆರೆ ಹಾವಳಿಯಿಂದ ಆದ ಒಟ್ಟು ನಷ್ಟದ ಪ್ರಮಾಣವೆಷ್ಟು?

ಆ) ಈ ನೆರೆ ಹಾವಳಿಗೆ ಭಾಗಶಃ ಹಾಗೂ ಪೂರ್ತಿ ಹಾನಿಯಾದ ಮನೆಗಳ ಸಂಖ್ಯೆ ಎಷ್ಟು?

ಇ) ಹಾನಿಗೊಳಗಾದವರಿಗೆ ನೀಡಲಾಗಿರುವ ಪರಿಹಾರದ ಒಟ್ಟು ಮೊತ್ತವೆಷ್ಟು? ಹಾನಿಗೊಳಗಾದವರಿಗೆ ಇನ್ನೂ ನೀಡಬೇಕಾಗಿರುವ ಪರಿಹಾರದ ಬಾಕಿ ಮೊತ್ತವೆಷ್ಟು?

ಈ) ಈ ಪರಿಹಾರವನ್ನು ಪೂರ್ಣ ಪ್ರಮಾಣದಲ್ಲಿ ನೀಡಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗುವುದು?

ಉ) ಹೆಚ್ಚುವರಿ ಮನೆಗಳನ್ನು ಹೊನ್ನಾವರ ಹಾಗೂ ಭಟ್ಕಳ ತಾಲ್ಲೂಕು ನೆರೆ ಪೀಡಿತರಿಗೆ ಮಂಜೂರು ಮಾಡಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು):

ಅ) ನಷ್ಟದ ವಿವರ ಹೀಗಿದೆ - (ರೂ.ಲಕ್ಷಗಳಲ್ಲಿ)

ಭಟ್ಕಳ ತಾಲ್ಲೂಕು	-	282.21
ಹೊನ್ನಾವರ ತಾಲ್ಲೂಕು	-	70.22
ಒಟ್ಟು	-	352.43